# ಎರಡು ರೂಪಕಗಳು

ನಮ್ಮ ದೈನಂದಿನ ಮಾತುಗಳಲ್ಲಿ ಪೂರ್ವಿಕರ ಅನುಭವಗಳು ಸೇರಿಕೊಂಡಿರುತ್ತವೆ. ಅವು ಸಾಂದರ್ಭಿಕವಾಗಿ ಹೊರಬರುತ್ತಿರುತ್ತವೆ. ಈಗ ಕಾಸ್ಮೊಪಾಲಿಟನ್ ನಗರಗಳಲ್ಲಿ ನಾವು ಪಿಜ್ಜಾ ಜೊತೆ ನಲಿದಾಡುತ್ತಿದ್ದೇವೆ. ಅಲ್ಲಿ ಕೃತಕ ಪರಿಸರವೇ ಉಂಟು. ಅಲ್ಲಿರುವ ಜನ ಕಂಗ್ಲಿಷ್ ಮಾತನಾಡುತ್ತ, ತಮ್ಮ ಸಹಜವಾದ ನಡೆಯಿಂದ ದೂರ ಇರುವುದನ್ನು ನಾವೀಗ ಕಾಣುತ್ತಿದ್ದೇವೆ. ಇಂಥವರಿಗೊ ಸದಾ ಟಿ.ವಿ.ಧ್ಯಾನ. ಮೊಬೈಲ್ ಮತ್ತು ಐಪಾಡ್ ಜಗತ್ತು ಇವರನ್ನು ಆವರಿಸಿದೆ. ಇಲ್ಲಿ ಸಹಜತೆಗೆ ದಾರಿಯೇ ಇಲ್ಲವಾಗಿದೆ. ಈ ಸನ್ನಿವೇಶ ಈಗೀಗ ಹಳ್ಳಿಗಳಿಗೂ ಚಿಕ್ಕಪುಟ್ಟ ಗ್ರಾಮಗಳಿಗೂ ಎಡತಾಕುತ್ತಿರುವುದು ವಿಷಾದನೀಯ. ಹೀಗಾಗಿ, ಮನುಷ್ಯನು ಸಹಜ ಲಯವನ್ನು ಕಳೆದುಕೊಳ್ಳುತ್ತಿದ್ದಾನೆ. ಅವನು ಪೂರ್ವಿಕರಿಂದ ಬಂದ ಹಾಡುಗಳನ್ನು ಮರೆಯುತ್ತಿದ್ದಾನೆ. ರಾಮ, ರಾವಣ, ಧರ್ಮರಾಯ ದುರ್ಯೋಧನ ವೇಷಗಳು ನಮ್ಮಿಂದ ಕಣ್ಮರೆಯಾಗುತ್ತಿವೆ. ಸಂಗೀತದ ಹಳೆಯ ಮಟ್ಟುಗಳ ಜಾಗದಲ್ಲಿ ಫ್ಯೂಷನ್ ಸಂಗೀತ ಬಂದು ಎದೆಗಾತು ಕುಳಿತಿದೆ.

ನಮ್ಮ ದೈನಂದಿನ ಬದುಕಿಗೆ ಸೇರಿದ ಜೀವಂತ ಪರಿಸರವನ್ನು ನಾವು ಕ್ರಮಕ್ರಮೇಣ ಕಳೆದುಕೊಳ್ಳುತ್ತಿದ್ದೇವೆ. ಭಾಷೆಯಲ್ಲಿ ಸಂಭವಿಸುತ್ತಿರುವ ಈ ನಡಿಗೆಯನ್ನು ನಾವು ಗಮನಿಸುವುದು ಅವಶ್ಯ. ನಮ್ಮ ಮನೆಗಳಲ್ಲಿ ಪ್ಲಾಸ್ಟಿಕ್ ಹೂಗಳನ್ನೊ ಕುಂಡಗಳನ್ನೊ ಇಡುತ್ತಿದ್ದೇವೆ. ಅಲ್ಲಿದ್ದ ಮಣ್ಣಿನ ಕುಂಡಗಳು, ಎಲೆ ಹೂಬಳ್ಳಿಗಳು ಹಿಂದೆ ಸರಿದಿವೆ. ಜೀವಂತ ಮನುಷ್ಯರ ಜಾಗದಲ್ಲಿ ಅನಿಮೇಷನ್ ರೂಪಿತ ಬೊಂಬೆಗಳು ನಮ್ಮ ಮಕ್ಕಳನ್ನು ಆಕರ್ಷಿಸುತ್ತಿವೆ. ಭಾಷೆಗೆ ಇದ್ದ ಅಭಿಧಾಶಕ್ತಿಯೇ ಇಲ್ಲವಾಗುತ್ತಿದೆ. ನಾವು ಆಡುವ ಮಾತಿನೊಳಗೆ ಪ್ರಾಣಶಕ್ತಿಯೊಂದು ಸದಾ ಇದ್ದೇ ಇರುತ್ತಿತ್ತು. ಅಲ್ಲಿ ಭಾವದ ಅಲೆಗಳು ತೊನೆದಾಡುತ್ತಿದ್ದವು. ಹಿಂದಿನಿಂದ ಬಂದ ಅನೇಕ ಮಾತುಗಳನ್ನು ಸಾಂದರ್ಭಿಕವಾಗಿ ತಮ್ಮ ಮಾತಿನೊಳಗೆ ಹಿರಿಯರು ಸೇರಿಸಿಕೊಳ್ಳುತ್ತಿದ್ದರು. ಇದು ಅಕ್ಷರಸ್ಥ ನಿರಕ್ಷರಸ್ಥ ಎಂಬ ಕಂದಕದ ನಡುವಣ ಪ್ರಶ್ನೆಯಲ್ಲ! ಹಾಗೆ ನೋಡಿದರೆ, ಅಕ್ಷರಸ್ಥರೇ ಬೇರೆ ವಿದ್ಯಾವಂತರೇ ಬೇರೆ. ವಿದ್ಯಾವಂತರಲ್ಲಿ ವಿವೇಕ, ವಿನಯ, ಸಭ್ಯತೆ, ಸಜ್ಜನಿಕೆಗಳು ಇರುತ್ತವೆ. ನಾವು ಅಂಥವರನ್ನು ಮಾತ್ರ 'ವಿದ್ಯಾವಂತ' ಎಂಬ ಹೆಸರಿನಿಂದ ಕರೆಯುತ್ತೇವೆ.

ನಮ್ಮ ಹಳ್ಳಿಗಳಲ್ಲಿ ಅಕ್ಷರಸ್ಥರಲ್ಲದ ವಿದ್ಯಾವಂತರು ಸದಾ ಇರುತ್ತಿದ್ದರು. ಅವರು ತಮ್ಮ ಅನುಭವಗಳಿಗೆ ಭಾಷೆಯ ಭಾವವನ್ನು ತೊಡಿಸುತ್ತಿದ್ದರು. ಅವರು ಭಾಷೆಯನ್ನು ಭಾವ ಜಗತ್ತಿನಿಂದ ಕಾಣುತ್ತಿದ್ದರು. ಸಮಾಜದ ಪ್ರತಿಯೊಬ್ಬರೂ ತಮ್ಮ ತಮ್ಮ ಆಳವನ್ನು ಅರಿತು ಮಾತನಾಡುತ್ತಿದ್ದರು. ಭಾಷೆಯ ಮೂಲಕ ಧನ್ಯರಾಗುತ್ತಿದ್ದರು. ಭಾಷೆ ಕೇವಲ ಮಾಧ್ಯಮವಲ್ಲ. ಆ ಭಾಷೆಯೊಳಗೆ ನೂರಾರು ವರ್ಷದ ಅನುಭವದ ಗಣಿ ಇರುತ್ತಿದ್ದವು. ಅವರಿಗೆ ರಾಮಾಯಣ ಮಹಾಭಾರತದ ಸನ್ನಿವೇಶಗಳೊ ಸಂಗತಿಗಳೊ ಕೇಳಿ ಗೊತ್ತಿತ್ತು. ಅವರು ವಾಲ್ಮೀಕಿ ವ್ಯಾಸರ ಕೃತಿಗಳನ್ನು ಓದದೆ ಇದ್ದರೂ ಆ ಮಹಾಕೃತಿಗಳ ಅಂತರಂಗವನ್ನು ಅರಿತಿದ್ದರು. ಕಥೆ ಮತ್ತು ತತ್ವಗಳಲ್ಲಿ ಕತೆಯ ಮೂಲಕ ತತ್ವದ ಹಾದಿಯನ್ನು ಹಿಡಿಯುತ್ತಿದ್ದರು. ನಮ್ಮ ಹಳ್ಳಿಗಳಲ್ಲೊ ಗ್ರಾಮಗಳಲ್ಲೊ ಇರುತ್ತಿದ್ದ ಅನುಭಾವಿಗಳು, ಸಂತರು, ಸಿದ್ಧರು, ಅವಧೂತರು ಸಾಂದರ್ಭಿಕವಾಗಿ ಒಂದೊಂದು ಸಂದರ್ಭವನ್ನು ವ್ಯಾಖ್ಯಾನಿಸುತ್ತಿದ್ದರು. ಚಟ್ಟೇಕಂಬದ ವೀರಪ್ಪ ತಾತಾ ಎಂಬ ಒಬ್ಬ ಸಿದ್ಧಪುರುಷ ರಾಮಾಯಣ ಮತ್ತು ಮಹಾಭಾರತಕ್ಕೆ ಕೊಟ್ಟ ಅವರ ಪ್ರತಿಕ್ರಿಯೆ ಹೀಗಿದೆ:

ವೀರಪ್ಪ ತಾತ ಅನೇಕ ಬಾರಿ ಮಾತನಾಡುವಾಗ ಮಧ್ಯದಲ್ಲಿ ಭಕ್ತರಿಗೆ ಪ್ರಶ್ನೆ ಹಾಕುತ್ತಿದ್ದುದೂ ಉಂಟು. ಏ ಸ್ವಾಮಿ. ಕೌರವರು ಅರಗಿನ ಮನೆಗೆ ಬೆಂಕಿ ಹಾಕಿದರಂತೆ. ಪಾಂಡವರು ಮೈಮರೆತು ಮಲಗಿದ್ದರಂತೆ. ಭೀಮನು ಅಣ್ಣ ತಮ್ಮಂದಿರನ್ನು ಕಂಕುಳಾಗೆ ಅವುಚಿಕೊಂಡು ಸುರಂಗಮಾರ್ಗದೊಳಗಿಂದ ತಪ್ಪಿಸಿಕೊಂಡು ಹೋದ್ನಂತೆ ಇದು ಎಂಗೆ? ಎಂದು ಪ್ರಶ್ನೆ ಹಾಕಿದಾಗ ಅದಕ್ಕೆ ಭಕ್ತರು ಉತ್ತರ ಹೇಳದೆ ಹೋದದ್ದುಂಟು. ಆಗ ಭಕ್ತರು ವಿಶೇಷವಿದ್ದರೆ ನೀವೇ ಹೇಳಬೇಕು ಎಂದು ಕೇಳಿಕೊಂಡರೆ, ಅವರು ಮೌನ ಮುರಿದು "ಅರಗಿನ ಮನೆ ಅಂದ್ರೆ ಈ ಶರೀರ ಕಣ್ಲಾ. ಅದಕೆ ಬೆಂಕಿ ಇಟ್ರೆ ಸುಟ್ಹೋಗ್ತದೆ. ಭೀಮ ಅಂದ್ರೆ ವಾಯುಪುತ್ರ ಅಲ್ಲವೆ? ಅವ್ನೆ ಪ್ರಾಣ, ಮುಖ್ಯಪ್ರಾಣ. ಮೂಗಿನ ಭಾಗ ತೋರಿಸಿ ಇದೇ ಸುರಂಗ ಮಾರ್ಗ. ಇದರಾಗಿಂದ ಅಪಾನ, ವ್ಯಾನ, ಉದಾನ, ಸಮಾನ ಅಂಬೋ ನಾಲ್ಕು ಜನ ಅಣ್ಣತಮ್ಮಂದಿರನ್ನು ಕರಕೊಂಡು ಓಲ್ಹೋಗ್ತಾನೆ. ಅದಕೆ ಪ್ರಾಣ ಓಯ್ತು. ಜೀವ ಓಯ್ತು ಅಂತಾರೆ. ಜೀವ ಒಗೋದು ಯಾರಿಗಾರ ಕಾಣ್ಸತತೇ? ಅದಕ್ಕೆ ಜೀವವನ್ನು 'ಸಂಜೀವ' ಅಂತ ಕರೆಯೋದು. ಜನಕೆ ತತ್ವದ ಮೂಲ ತಿಳೀಲಿ ಅಂತ ಕಥೆ ಮಾಡಿ ಅದರೊಳಗೆ ತತ್ವದ ಹೂರಣ ಇಟ್ಟವರೆ ನಮ್ಮ ಪೂರ್ವಿಕರು. ನಾವು ಕಥೆ ಇಟಕಂಡು ತತ್ವ ಬಿಟ್ಟುಬಿಡುತೀವೆ; ಸಿಪ್ಪೆ ತಂಬದು, ಹೂರಣ ಬಿಸಾಕದು" ಇದು ತಾತನ ವ್ಯಾಖ್ಯಾನ!

ಅದೇ ರೀತಿ ಒಮ್ಮೆ ಅವರು ರಾಮಾಯಣಕ್ಕೆ ಸಂಬಂಧಿಸಿದಂತೆ ಅಶೋಕ ವನದಾಗೆ ಸೀತೆ ಬೋರಾಡಿ ರಾಮ ಸಿಗಲಿಲ್ಲ ಅಂತ ಅತ್ತಳಂತೆ ಯಾಕೋ? ಅದರ ಹೆಸರೆ ಅಶೋಕವನ. ಅದರಾಗೆ ವಾಸ ಮಾಡೋರಿಗೆ ಶೋಕ ಯಾಕೆ ಬರಬೇಕು? ಈ ಪ್ರಶ್ನೆಗೆ ಯಥಾಪ್ರಕಾರ ಉತ್ತರ ಹೇಳಿದರಂತೆ. ಸೀತೆ ಎಂದರೆ ಮನಸ್ಸು ಕಣೋ. ಅದು ಎಲ್ಲಿಯ ವರೆಗೆ ರಾಮನನ್ನು ಹಿಡಕಂಡಿತ್ತೋ ಅದಕ್ಕೆ ದುಃಖ ಇರಲಿಲ್ಲ. ಹತ್ತು ನಮೂನಿ ಆಸೆ, ಕಾಮಗಳು ಯಾವಾಗ ಸೀತೆ ಅಂಬೊ ಮನಸ್ಸನ್ನು ಸೆಳಕೊಂಡವೋ ಸುರುವಾತಪ್ಪ ಸಂಕಟ. ಆವಾಗ ಆಂಜನೇಯ ಅಂದ್ರೆ ವಾಯು. ಕುಂಬಕ ಪ್ರಾಣಾಯಾಮ ಮಾಡಿದ್ದು ಸಮುದ್ರ ದಾಟಿದ್ದನ್ನು ಹೇಳವರೆ. ಆಜ್ಞಾಚಕ್ರಕ್ಕೆ ಕುಂಡಲಿ ವಾಯು ಏರಿಸಿದಾಗ, ಸೀತೆ ಎಂಬೊ ಮನಸಿಗೆ, ಆಜ್ಞಾಚಕ್ರದಲ್ಲೆ ಜ್ಯೋತಿ ಕಂಡಿತಲ್ಲಾ ಅದೇ ಆಂಜನೇಯ ತೋರಿಸಿದ ಚೂಡಾಮಣಿ. ಆಗ ಸೀತೆಗೆ ನಿಘಂಟಾಯಿತು. ಇನ್ನು ರಾಮದರ್ಶನ ದೂರವಿಲ್ಲ ಅಂತ. ಇದು ಕತೆಯ ಹೂರಣ. ಅಂಗೆ ಸಾಧನೇನ ಪಟ್ಟಾಗಿ ಹಿಡಿದ್ರೆ ಎರಡರಾಗೆ ಒಂದಾಗೋಕೆ ಬರ್ತದೆ. ಬರೀ ಕತೆ ಕೇಳಿದ್ರೆ ನಿದ್ರೆ ಬತ್ತದೆ. ಇದು ವೀರಪ್ಪ ತಾತನ ವ್ಯಾಖ್ಯಾನ. ಅವರು ಪ್ರತಿಯೊಂದನ್ನು ಯೌಗಿಕ ಮಾತಿನಲ್ಲೆ ಹೇಳುತ್ತಿದ್ದರು. ಇವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಚಟ್ಟೇಕಂಬ ಎಂಬ ಕುಗ್ರಾಮದಲ್ಲಿ ಇದ್ದವರು.

■ ಪುರಂಜೀವಿ

## ಮಾತೇ ಮುತ್ತು

★ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರತಿಯೊಂದು ಸಣ್ಣ ವಿಷಯಕ್ಕೂ ಮಹತ್ವ ನೀಡಬೇಕು.

—ಜವಾಹರಲಾಲ್ ನೆಹ್ರೂ

★ ನಾನು ಹುತಾತ್ಮನಾಗಲು ಸಿದ್ಧನಿದ್ದೇನೆ; ಆದರೆ ಅದನ್ನು ಮುಂದೂಡಲು ಬಯಸುತ್ತೇನೆ.

—ವಿನ್‌ಸ್ಟನ್ ಚರ್ಚಿಲ್

★ ಮದುವೆ ಮತ್ತು ಮರಣವನ್ನು ಸ್ವಾಗತಿಸಲೇಬೇಕು. ಮೊದಲನೆಯದ್ದು ಸಂತೋಷದ ಭರವಸೆ ನೀಡುತ್ತದೆ. ಎರಡನೆಯದ್ದು ಸಂತೋಷವನ್ನು ಖಚಿತಪಡಿಸುತ್ತದೆ.

—ಮಾರ್ಕ್ ಟ್ವೈನ್

★ ಕಣ್ಣಿಲ್ಲದವಗಿನ್ನು ಕನ್ನಡಿಯಿದ್ದು ಫಲವೇನು,
ಪುಣ್ಯವಿಲ್ಲದವನ ಪ್ರೌಢಿಮೆ ಮೆರೆದರೇನು?

—ಸಂತ ಕನಕದಾಸ

★ ಉಪಯುಕ್ತ ವಸ್ತುಗಳನ್ನು ಅತ್ಯಧಿಕ ಉತ್ಪಾದಿಸಿದರೆ, ನಿಷ್ಪ್ರಯೋಜಕ ಜನರ ಸಂಖ್ಯೆ ಹೆಚ್ಚುತ್ತದೆ.

—ಕಾರ್ಲ್ ಮಾರ್ಕ್ಸ್

★ ಸಮಾಜದ ಮೊದಲ ಕರ್ತವ್ಯವೇ ನ್ಯಾಯ ಪರಿಪಾಲನೆ.

—ಅಲೆಕ್ಸಾಂಡರ್ ಹ್ಯಾಮಿಲ್ಟನ್

★ ಭರವಸೆ ಎನ್ನುವುದು ಕೆಟ್ಟ ಶಬ್ದ. ಅದರ ಅರ್ಥ– ನೀವು ಏನಾಗಬೇಕಿತ್ತೋ ಅದಾಗಲಿಲ್ಲ ಎಂದು.

—ಹೆನ್ರಿ ಮಿಲ್ಲರ್

★ ಕಠಿಣ ಕೆಲಸಗಳನ್ನು ಮೊದಲು ಮಾಡಿ. ಸುಲಭದ ಕೆಲಸಗಳು ತನ್ನಷ್ಟಕ್ಕೇ ಆಗುತ್ತವೆ.

—ಡೇಲ್ ಕಾರ್ನೆಗಿ

★ ನೀರ ಕಂಡಲ್ಲಿ ಮುಳುಗುವರಯ್ಯಾ, ಮರವ ಕಂಡಲ್ಲಿ ಸುತ್ತುವರಯ್ಯಾ, ಬತ್ತುವ ಜಲವ, ಒಣಗುವ ಮರವ ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ.

– ಬಸವಣ್ಣ